ಪ್ರವಾಸ ಚಿಂತನ

# ಎದೆಗೆ ಬಿದ್ದ ಹಿಮಾಲಯ

## ಹಿಮಾಲಯವೆಂದರೆ ಬರಿ ಪರ್ವತವಲ್ಲ, ನದಿ ಕೊಳ್ಳಗಳಷ್ಟೇ ಅಲ್ಲ...



ಕೇದಾರದ ಹಾದಿಯಲ್ಲಿ...

**ಒಮ್ಮೆ ಹಿಮಾಲಯಕ್ಕೆ ಹೋಗಿಬಂದರೆ, ಅದು ಜನ್ಮ ಜನ್ಮದ ಅನುಬಂಧದಂತೆ ಕಾಡತೊಡಗುತ್ತದೆ. ಹಿಮಾಲಯವನ್ನು ನದಿಗಳ ಸೆಳವಿನಿಂದ, ಅದರ ಪರ್ವತಗಳ ವಿಸ್ತಾರ ಎತ್ತರಗಳಿಂದ ನೋಡಿದರೆ ಒಂದು ಅನುಭವ; ಜನರ ವಿಶ್ವಾಸದಿಂದ, ನೀರಿನ ಸ್ವಚ್ಛತೆಯಿಂದ, ಹವೆಯ ತಂಪಿನಿಂದ ಅಳೆದರೆ ಇನ್ನೊಂದೇ ಅನುಭವ. ಈ ಅನುಭವಲೋಕಗಳನ್ನು ಕಾಣಿಸುವ, ಹಿಮದ ಸನ್ನಿಧಿಗೆ ಸಹೃದಯರನ್ನು ನಡೆಯುವಂತೆ ಪ್ರೇರೇಪಿಸುವ ವಿಶಿಷ್ಟ ಅನುಭವ ಕಥನ.**

**■ ರಹಮತ್ ತರೀಕೆರೆ**

ಹಿಮಾಲಯವನ್ನು 'ದೇವಭೂಮಿ' ಎನ್ನಲಾಗುತ್ತದೆ. ಇಲ್ಲಿನ ಗಿಡಮೂಲಿಕೆ ಹಾಗೂ ಗುಹಾವಾಸಿ ಯೋಗಿಗಳ ದೀರ್ಘಾಯುಷ್ಯದ ಮೇಲೆ ದಂತಕತೆಗಳಿವೆ. ಬದುಕಿನಲ್ಲಿ ದಣಿದ ನಾಗರಿಕರು ತಮ್ಮ ಮರುಚೈತನ್ಯಕ್ಕಾಗಿ, ಯಾತ್ರಾರ್ಥಿಗಳು ಪುಣ್ಯ ಸಂಪಾದನೆಗಾಗಿ ಹಿಮಾಲಯವನ್ನು ಹುಡುಕಿ ಹೋಗುತ್ತಲೇ ಇದ್ದಾರೆ. ಇದು ಪ್ರೇಮಿಗಳ ಮಧುಚಂದ್ರದ ತಾಣವೆಂದೂ ಹೆಸರಾಗಿದೆ.

ಹಿಮಶಿಖರಗಳ ಬುಡದಲ್ಲಿ, ಆಳ ಕಣಿವೆಯಲ್ಲಿ, ದೇವದಾರು ವೃಕ್ಷಗಳ ಅಡಿಯಲ್ಲಿ, ಹರಿವ ಹೊಳೆಗಳ ದಡದಲ್ಲಿ ಕಟ್ಟಿದ ಕಲ್ಲುಚಪ್ಪಡಿ ಮಾಡಿನ ಕಟ್ಟಿಗೆ ಗೋಡೆಗಳ ಮನೆಗಳನ್ನು ನೋಡುವಾಗ, ಇಲ್ಲಿನವರು ಸ್ವರ್ಗದಲ್ಲಿದ್ದಾರೆಂದೇ ಅನಿಸುತ್ತದೆ. ತುಸು ತಾಳ್ಮೆಯಿಂದ ಗಮನಿಸಿದರೆ, ಈ ಭೂಸ್ವರ್ಗದಲ್ಲಿ ಭೂಕುಸಿತ, ಕೊಚ್ಚಿಹಾಕುವ ಹೊಳೆ, ಹಿಮಪಾತ, ಸಾಯಿಸುವ ಥಂಡಿಗಳಿರುವುದೂ ತಿಳಿಯುತ್ತದೆ; ಕಠಿಣ ಹವಾಮಾನದೊಳಗೆ ಪರಿಮಿತ ಸಂಪನ್ಮೂಲಗಳಲ್ಲಿ ಜನ ನಿತ್ಯವೂ ಹೋರಾಡುವುದು ಗೊತ್ತಾಗುತ್ತದೆ.

ನಿರ್ಜನ ಪ್ರದೇಶಕ್ಕೆ ಹೋಗಿ, ಕಾಡನ್ನು ಕಡಿದು ಹೊಳೆಯನ್ನು ತಿರುಗಿಸಿ ಕೃಷಿ ಮಾಡಿದ ಸಾಹಸಿಯನ್ನು ಕುರಿತು ಕಾರಂತರು 'ಬೆಟ್ಟದಜೀವ' ಕಾದಂಬರಿ ಬರೆದರು. ನಿಸರ್ಗದೊಡನೆ ಹೋರಾಡುವ ಹಿಮಾಲಯಿಗರು ಈ ಅರ್ಥದಲ್ಲಿ ಬೆಟ್ಟದಜೀವಗಳೇ. ಆದರೆ ಈ ಬೆಟ್ಟದಜೀವಗಳು ಹೊಸ ಬದುಕನ್ನು ಕಟ್ಟಿಕೊಳ್ಳಲು ಬಂಧನಕಾರಿಯಾದ ಪರ್ವತ–ಕಣಿವೆಗಳ ನಾಡನ್ನು ತೊರೆದು ಕೆಳಗಿನ ಬಯಲಿನತ್ತ ಹರಿಯಲು ಹಾತೊರೆಯುತ್ತಾರೆ ಎಂಬುದೂ ಅರಿವಾಗುತ್ತದೆ.

ಹಿಮಾಲಯಕ್ಕೆ ಚಾರಣಿಗರಿಗೆ ಎದ್ದು ಕಾಣುವ ಸಂಗತಿಗಳೆಂದರೆ, ಅಪೌಷ್ಟಿಕತೆಯಿಂದ ಬಳಲುವ ಹರುಕು ಬಟ್ಟೆಯುಟ್ಟ ಮಕ್ಕಳು ಟಾಪಿ ಕೇಳುವುದು; ಔಷಧಿ ಬೇಡಲು ಊರಿನ ಜನ ಕಾಲುಹಾದಿ ಬದಿ ನಿಲ್ಲುವುದು. ಚಂದ್ರಖಾನಿ ಚಾರಣದಲ್ಲೊಮ್ಮೆ ಕಟ್ಟಿಗೆ ಹೊತ್ತವನೊಬ್ಬ ಮಗುವಿನ ಬೇಧಿ ನಿಲ್ಲಲು ಔಷಧಿ ಕೇಳಿದ. ನಮ್ಮ ತಂಡದಲ್ಲಿ ದಂತವೈದ್ಯರಿದ್ದರು. ಆಗ 'ಹಾಗಾದರೆ ಅದೇ ಮದ್ದುಕೊಡಿ. ನನ್ನ ಹೆಂಡತಿಗೆ ಹಲ್ಲುನೋವಿದೆ'